**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ರವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ:-** ಕರ್ನಾಟಕ ರಾಜ್ಯ ಪೋಲೀಸ್ ಇಲಾಖೆಯು ಸಿವಿಲ್ ಘಟಕದ ಡಿವೈಎಸ್‌ಪಿ ಹುದ್ದೆಗಳನ್ನು ಮಾತ್ರ ನೇರ ನೇಮಕಾತಿ ಮೂಲಕ ಭರ್ತಿ ಮಾಡುತ್ತಿದ್ದು, ಪೋಲೀಸ್ ಇಲಾಖೆಯ ಇತರೆ ಘಟಕಗಳಾದ ಡಿಎಆರ್, ಸಿಎಆರ್, ಕೆಎಸ್‌ಆರ್‌ಪಿ, ಪಿಂಗರ್‌ಪ್ರಿಂಟ್, ಕೆಎಸ್‌ಐಎಸ್‌ಎಫ್, ಹಾಗೂ ಇಂಟಲಿಜೆನ್ಸ್ ನಲ್ಲಿನ ಡಿವೈಎಸ್‌ಪಿ ಹುದ್ದೆಗಳು ನೇರ ನೇಮಕಾತಿ ಮೂಲಕ ಭರ್ತಿ ಮಾಡದೇ, ಮುಂಬಡ್ತಿ ಮೂಲಕ ಭರ್ತಿ ಮಾಡುತ್ತಿರುವುದರಿಂದ ಉದ್ಯೋಗಕ್ಕಾಗಿ ಕಾಯುತ್ತಿರುವ ಪ್ರತಿಭಾವಂತ ಯುವಕ/ಯುವತಿಯವರಿಗೆ ಅನ್ಯಾಯವಾಗುತ್ತಿರುವ ಕುರಿತು.

**ಉತ್ತರ:-** ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ/ಇಲಾಖೆಯ ನೀತಿ ಮತ್ತು ಅವಶ್ಯಕತೆಗೆ ಅನುಗುಣವಾಗಿ ರೂಪಿಸಲಾಗುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಅಧಿಸೂಚನೆ ಸಂ. ಹೆಚ್ 162 ಪೊಸಿಅ 2003, ದಿನಾಂಕ:23.12.2004 (2004 ರನ್ವಯ) ರಲ್ಲಿ ಡಿವೈಎಸ್‌ಪಿ (ಸಿವಿಲ್) ವೃಂದದ ಮಂಜೂರಾತಿ ಬಲದಲ್ಲಿ ನೇರ ಮತ್ತು ಮುಂಬಡ್ತಿ ಹುದ್ದೆಗಳನ್ನು 20:80 ಅನುಪಾತದಲ್ಲಿ ನೇಮಕ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಯಲ್ಲಿದೆ.

ಡಿವೈಎಸ್‌ಪಿ (ಸಿಎಆರ್/ಡಿಎಆರ್) ವೃಂದದ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ (2004 ರನ್ವಯ) ಎಲ್ಲಾ ಹುದ್ದೆಗಳನ್ನು ಮುಂಬಡ್ತಿ ಮೂಲ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಮುಂಬಡ್ತಿಗೆ ಪಿಐ (ಸಿಎಆರ್/ಡಿಎಆರ್) ಹುದ್ದೆಯಲ್ಲಿ 8 ವರ್ಷಗಳ ಸೇವೆಯನ್ನು ನಿಗದಿಪಡಿಸಿದ್ದು, 8 ವರ್ಷಗಳ ಸೇವೆ ಸಲ್ಲಿಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, 5 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳನ್ನು ಪರಿಗಣಿಸಿ ಪಿಐ (ಸಿಎಆರ್/ಡಿಎಆರ್) ವೃಂದದ ಜೇಷ್ಠತಾ ಪಟ್ಟಿಯ ಜೇಷ್ಠತೆಯನ್ವಯ ಹಾಗೂ ಕಾಲ ಕಾಲಕ್ಕೆ ಡಿವೈಎಸ್‌ಪಿ (ಸಿಎಆರ್/ಡಿಎಆರ್) ವೃಂದದ ರಿಕ್ತ ಸ್ಥಾನದ ಲಭ್ಯತೆಯನ್ವಯ ಮುಂಬಡ್ತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.

ಪಿಂಗರ್ ಪ್ರಿಂಟ್ ವೃಂದಕ್ಕೆ ಸಂಬಂಧಿಸಿದಂತೆ ಡಿವೈಎಸ್‌ಪಿ (ಎಫ್.ಪಿ.ಬಿ) ವೃಂದ ಮತ್ತು ನೇಮಕಾತಿ ನಿಯಮಗಳನ್ವಯ (2004 ರನ್ವಯ) ಎಲ್ಲಾ ಹುದ್ದೆಗಳನ್ನು ಮುಂಬಡ್ತಿ ಮೂಲ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಮುಂಬಡ್ತಿಗೆ ಪಿಐ (ಎಫ್.ಪಿ.ಬಿ) ಹುದ್ದೆಯಲ್ಲಿ 8 ವರ್ಷಗಳ ಸೇವೆಯನ್ನು ನಿಗಧಿಪಡಿಸಿದ್ದು, 8 ವರ್ಷಗಳ ಸೇವೆ ಸಲ್ಲಿಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, 5 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳನ್ನು ಪರಿಗಣಿಸಿ ಪಿಐ (ಎಫ್.ಪಿ.ಬಿ) ವೃಂದದ ಜೇಷ್ಠತಾ ಪಟ್ಟಿಯ ಜೇಷ್ಠತೆಯನ್ವಯ ಹಾಗೂ ಕಾಲ ಕಾಲಕ್ಕೆ ಡಿವೈಎಸ್‌ಪಿ (ಸಿಎಆರ್/ಡಿಎಆರ್) ವೃಂದದ ರಿಕ್ತ ಸ್ಥಾನದ ಲಭ್ಯತೆಯನ್ವಯ ಮುಂಬಡ್ತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.

ಇಂಟಲಿಜೆನ್ಸ್ ವೃಂದಕ್ಕೆ ಸಂಬಂಧಿಸಿದಂತೆ ಡಿವೈಎಸ್‌ಪಿ (ಇಂಟಲಿಜೆನ್ಸ್) ವೃಂದ ಮತ್ತು ನೇಮಕಾತಿ ನಿಯಮಗಳನ್ವಯ (2004 ರನ್ವಯ) ಶೇ. 50:50 ಅನುಪಾತದಲ್ಲಿ, 50% ಹುದ್ದೆಗಳನ್ನು ಪಿಐ (ಇಂಟಲಿಜೆನ್ಸ್) ಅಧಿಕಾರಿಗಳನ್ನು ಮುಂಬಡ್ತಿಯ ಮೂಲಕ ನಿಯಮಗಳಲ್ಲಿ ಅವಕಾಶವಿರುತ್ತದೆ, ಮುಂಬಡ್ತಿಗೆ ಪಿಐ (ಇಂಟಲಿಜೆನ್ಸ್) ಹುದ್ದೆಯಲ್ಲಿ 8 ವರ್ಷಗಳ ಸೇವೆಯನ್ನು ನಿಗಧಿಪಡಿಸಿದ್ದು, 8 ವರ್ಷಗಳ ಸೇವೆ ಸಲ್ಲಿಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, 5 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳನ್ನು ಪರಿಗಣಿಸಿ ಪಿಐ (ಇಂಟಲಿಜೆನ್ಸ್) ವೃಂದದ ಜೇಷ್ಠತಾ ಪಟ್ಟಿಯ ಜೇಷ್ಠತೆಯನ್ವಯ ಹಾಗೂ ಕಾಲ ಕಾಲಕ್ಕೆ ಡಿವೈಎಸ್‌ಪಿ(ಇಂಟಲಿಜೆನ್ಸ್) ವೃಂದದ ರಿಕ್ತ ಸ್ಥಾನದ ಲಭ್ಯತೆಯನ್ವಯ ಮುಂಬಡ್ತಿ ಮೂಲಕ ಭರ್ತಿ ಮಾಡಲು ಮತ್ತು 50% ಹುದ್ದೆಗಳನ್ನು ಡಿವೈಎಸ್‌ಪಿ (ಸಿವಿಲ್), ಡಿವೈಎಸ್‌ಪಿ (ಸಿಎಆರ್/ಡಿಎಆರ್) ಮತ್ತು ಡಿವೈಎಸ್‌ಪಿ (ನಿಸ್ತಂತು) ವೃಂದದ ಅಧಿಕಾರಿಗಳನ್ನು ನಿಯುಕ್ತಿಗೊಳಿಸುವ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.

ಕೆಎಸ್‌ಆರ್‌ಪಿ ವೃಂದಕ್ಕೆ ಸಂಬಂಧಿಸಿದಂತೆ, ಸಹಾಯಕ ಕಮಾಂಡೆಂಟ್ (ಕೆಎಸ್‌ಆರ್‌ಪಿ) ವೃಂದಕ್ಕೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ವೃಂದ ಮತ್ತು ನೇಮಕಾತಿ) ನಿಯನಗಳು 2020 ರನ್ವಯ ಪ್ರಸ್ತುತ ಅಧಿಸೂಚನೆ ಸಂ. ಹೆಚ್‌ಡಿ 188 ಪೊಸಿಅ 2018, ದಿನಾಂಕ:06.05.2020 ರಲ್ಲಿ ಎಲ್ಲಾ ಹುದ್ದೆಗಳನ್ನು ಮುಂಬಡ್ತಿ ಮೂಲ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಮುಂಬಡ್ತಿಗೆ ಪಿಐ (ಸ್ಪೆಕೆಎಸ್‌ಆರ್‌ಪಿ) ಹುದ್ದೆಯಲ್ಲಿ 5 ವರ್ಷಗಳ ಸೇವೆಯನ್ನು ನಿಗಧಿಪಡಿಸಿದ್ದು, 5 ವರ್ಷಗಳ ಸೇವೆ ಸಲ್ಲಿಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, 3 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳನ್ನು ಪರಿಗಣಿಸಿ ಪಿಐ (ಸ್ಪೆಕೆಎಸ್‌ಆರ್‌ಪಿ) ವೃಂದದ ಜೇಷ್ಠತಾ ಪಟ್ಟಿಯ ಜೇಷ್ಠತೆಯನ್ವಯ ಹಾಗೂ ಕಾಲ ಕಾಲಕ್ಕೆ ಸಹಾಯಕ ಕಮಾಂಡೆಂಟ್( ಕೆಎಸ್‌ಆರ್‌ಪಿ) ವೃಂದದ ರಿಕ್ಷ ಸ್ಥಾನದ ಲಭ್ಯತೆಯನ್ವಯ ಮುಂಬಡ್ತಿ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.

ಕೆಎಸ್‌ಐಎಸ್‌ಎಫ್ ವೃಂದಕ್ಕೆ ಸಂಬಂಧಿಸಿದಂತೆ, ಸಹಾಯಕ ಕಮಾಂಡೆಂಟ್ (ಕೆಎಸ್ ಐಎಸ್ ಎಫ್) ವೃಂದಕ್ಕೆ ಕರ್ನಾಟಕ ರಾಜ್ಯ ಕೆಎಸ್‌ಐಎಸ್‌ಎಫ್ (ವೃಂದ ಮತ್ತು ನೇಮಕಾತಿ) ನಿಯಮಗಳು 2021 ರನ್ವಯ ಪ್ರಸ್ತುತ ಅಧಿಸೂಚನೆ ಸಂ. ಹೆಚ್‌ಡಿ 186 ಪೊಸಿ 2018, ದಿನಾಂಕ:24.01.2022 ರಲ್ಲಿ ಎಲ್ಲಾ ಹುದ್ದೆಗಳನ್ನು ಮುಂಬಡ್ತಿ ಮೂಲ ಭರ್ತಿ ಮಾಡಲು ನಿಯಮಗಳಲ್ಲಿ ಅವಕಾಶವಿರುತ್ತದೆ. ಮುಂಬಡ್ತಿಗೆ ಪಿಐ (ಕೆಎಸ್‌ಐಎಸ್‌ಎಫ್) ಹುದ್ದೆಯಲ್ಲಿ 5 ವರ್ಷಗಳ ಸೇವೆಯನ್ನು ನಿಗದಿಪಡಿಸಿದ್ದು, 5 ವರ್ಷಗಳ ಸೇವೆ ಸಲ್ಲಿಸಿದ ಅಧಿಕಾರಿಗಳು ಲಭ್ಯವಿಲ್ಲದಿದ್ದಲ್ಲಿ, 3 ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳನ್ನು ಪರಿಗಣಿಸಿ ಪಿಐ (ಕೆಎಸ್‌ಐಎಸ್ ಎಫ್) ವೃಂದದ ಜೇಷ್ಠತಾ ಪಟ್ಟಿಯ ಜೇಷ್ಠತೆಯನ್ವಯ ಹಾಗೂ ಕಾಲ ಕಾಲಕ್ಕೆ ಸಹಾಯಕ ಕಮಾಂಡೆಂಟ್ (ಕೆಎಸ್‌ಐಎಸ್‌ಎಫ್) ವೃಂದದ ರಿಕ್ತ ಸ್ಥಾನದ ಲಭ್ಯತೆಯನ್ವಯ ಎಲ್ಲಾ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಮತ್ತು ಮುಂಬಡ್ತಿಗೆ ಅರ್ಹ ಅಧಿಕಾರಿಗಳು ಪಿಐ (ಕೆಎಸ್‌ಐಎಸ್‌ಎಫ್) ವೃಂದದಲ್ಲಿ ಲಭ್ಯವಿಲ್ಲದೇ ಇದ್ದಲ್ಲಿ

ಸಹಾಯಕ ಕಮಾಂಡೆಂಟ್ (ಕೆಎಸ್ಆರ್‌ಪಿ), ಡಿವೈಎಸ್‌ಪಿ (ಸಿಎಆರ್/ಡಿಎಆರ್) ವೃಂದದ ಅಧಿಕಾರಿಗಳನ್ನು ನಿಯೋಜನೆಯ ಮೂಲಕ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಅಳವಡಿಸಲಾಗಿರುತ್ತದೆ.

**ಸಂಖ್ಯೆ:** ಒಇ 447 ಪಿಇಜಿ 2025

(ಡಾ. ಜಿ. ಪರಮೇಶ್ವರ)
ಗೃಹ ಸಚಿವರು